ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ನೀರಾವರಿ ಸೌಲಭ್ಯ

೧೪೭೭ (೨೯೮೮) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಳ ನೀರಾವರಿ ಆಣೆಕಟ್ಟೆಗಳು ಪೂರ್ಣವಾಗಿದ್ದಾಗ್ಯೂ ಕೂಡ ಇದರ ಫಲ ಅಲ್ಲಿನ ನಿವಾಸಿಗಳಿಗೆ ಯಾವ ರೀತಿಯಲ್ಲೂ ದೊರಕಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಈಗಾಗಲೇ ಏತ ನೀರಾವರಿಗಾಗಿ ಹೆಗ್ಗಡದೇವನಕೋಟೆಯ ಎನ್. ಬೆಳ್ಳೂರು ಮತ್ತು ಬೀರಂಬಳ್ಳಿ ಹತ್ತಿರವಿರುವ ಕಬಿನಿ ಹಿನ್ನೀರನ್ನು ಉಪಯೋಗಿಸುವ ಅಂದಾಜು ವೆಚ್ಚ ತಯಾರಾಗಿದೆಯೇ? ಅದನ್ನು ಕಾರ್ಯರೂಪಕ್ಕೆ ತಂದಲ್ಲಿ ಸುಮಾರು ೧೫೦೦ ಎಕರೆ ಭೂಮಿ ನೀರಾವರಿ ಸೌಲಭ್ಯವನ್ನು ಪಡೆಯುವ ಸಾಧ್ಯತೆ ಇರುವುದು ನಿಜವೇ?

ಇ) ಹೆಗ್ಗಡದೇವನಕೋಟೆ ತಾರಕ ಆಣೆಕಟ್ಟೆಯಲ್ಲಿ ಇಲ್ಲಿಯವರೆಗೂ ನೀರು ಶೇಖರಣೆ ಆಗದೆ ಅದರ ಅಚ್ಚುಕಟ್ಟಿಗೆ ಒಳಪಟ್ಟಂತಹ ಸುಮಾರು ೩೦ ಸಾವಿರ ಎಕರೆ ಬರಡಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಆ ರೈತರಿಗೆ ನೀರಿನ ಲಾಭವನ್ನು ಕೂಡಲು ಕಬಿನಿ ಹಿನ್ನೀರನ್ನು ಉಪಯೋಗಿಸಿ ಏತ ನೀರಾವರಿ ಕಾರ್ಯಕ್ರಮದ ಮೂಲಕ ಸರಬರಾಜು ಮಾಡಲು ಯೋಜಿಸಿ ಅಂದಾಜು ಕೂಡ ತಯಾರಾಗಿರುವುದು ನಿಜವೆ?

ಈ) ಹಾಗಿದ್ದಲ್ಲಿ ಎಂದಿನಿಂದ ಈ ಯೋಜನೆಯನ್ನು ಕಾರ್ಯರಂಭ ಮಾಡಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಬಿನಿ ಹೆಬ್ಬಳ್ಳ ಮತ್ತು ನುಗು ಯೋಜನೆಗಳ ಅಚ್ಚುಕಟ್ಟಿಗೆ ನೀರನ್ನು ಒದಗಿಸಲಾಗುತ್ತಿದೆ. ತಾರಕ ಯೋಜನೆಯಲ್ಲಿ ಮಾತ್ರ ಗೇಟುಗಳನ್ನು ಅಳವಡಿಸದಿದ್ದುದರಿಂದ, ಪ್ರತಿ ವರ್ಷ ಲಭ್ಯವಿರುವ ನೀರನ್ನು ಒದಗಿಸಲಾಗಿದೆ. ಮುಖ್ಯ ಯೋಜನೆಗಳಿಂದ ಸುಮಾರು ೧೧೫೫೫ ಹೆ. ಭೂಮಿ ನೀರಾವರಿ ಆಗುತ್ತದೆ.

ಆ) ಇಲ್ಲ.

ಇ) ತಾರಕ ಯೋಜನೆಯ ೭೦೪೦ ಹೆಕ್ಟೇರು ಅಚ್ಚುಕಟ್ಟಿನ ಪೈಕಿ ೬೮೧೦ ಹೆಕ್ಟೇರುಗಳಿಗೆ ನೀರಾವರಿ ಸಾಮರ್ಥ್ಯವನ್ನು ಈಗಾಗಲೇ ಸಾಧಿಸಲಾಗಿದ್ದು ಸಾಧ್ಯವಾದಷ್ಟೂ ಪ್ರದೇಶಗಳಿಗೆ ನೀರು ಒದಗಿಸಲಾಗುತ್ತಿದೆ. ಕಬಿನಿ ಹಿನ್ನೀರನ್ನು ಏತ ನೀರಾವರಿ ಮೂಲಕ ಉಪಯೋಗಿಸುವ ವಿಷಯ ಇನ್ನೂ ಪರಿಶೀಲನೆಯಲ್ಲಿದೆ.

ಈ) ಉದ್ಭವಿಸುವುದಿಲ್ಲ.

ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು

೧೪೮೦(೨೯೮೮) ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಈ ವರ್ಷದ ಜುಲೈ ೧ ರಿಂದ ರಾಜ್ಯದ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಪಸೂಲ. ಮಾಡಲಾಗುತ್ತಿದ್ದ ಶುಲ್ಕ ರದ್ದಾದ ಮೇಲೆ ಎಷ್ಟು ಸ್ಥಾನಗಳನ್ನು ಪ್ರತಿಭಾವಂತರಿಗೆ ಕೊಡಲಾಗಿದ? ಮತ್ತು ಎಷ್ಟು ಸ್ಥಾನಗಳು ಭರ್ತಿಯಾಗದೆ ಇನ್ನೂ ಉಳಿದಿವೆ? (ಕಾಲೇಜುಗಳವಾರು ವಿವರ ನೀಡುವುದು)

ಆ) ಹಾಗೆ ತೆರನಾಗಿರುವ ಸ್ಥಾನಗಳನ್ನು ತುಂಬಲು ಅನುಸರಿಸಲು ಉದ್ದೇಶಿಸಿರುವ ಕ್ರಮಗಳೇನು?